ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 357/2015

ಸಿ ಡಬ್ಲ್ಯೂ-2
ಪಿ ಡಬ್ಲ್ಯೂ-2

ದಿಃ 24-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ರಾಘು ಅಶೋಕ ನಾಯ್ಕು
ತಂದೆಯ ಹೆಸರುಃ ಅಶೋಕ ನಾಯ್ಕು
ವಯಸ್ಸುಃ 39 ವರ್ಷ
ಉದ್ಯೋಗಃ ವ್ಯಾಪಾರ
ವಿಳಾಸಃ ಕಸಬಾ, ಕೇಣಿ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ಚಾಸಾ-3 ರವರ ಪರಿಚಯ ಇರುತ್ತದೆ. ದಿಃ22-08-2014 ರಂದು ಅಂಕೋಲಾ ಪಿ ಎಸ್ ಐ (ಚಾಸಾ-7) ರವರು ಅಂಕೋಲಾ ನ್ಯಾಯಾಲಯದ ಆವರಣದಲ್ಲಿ ಪಂಚನಾಮೆಗೆಂದು ಬರಲು ತಿಳಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ-1 ಮತ್ತು 3 ರವರು ಇದ್ದೇವು. ಚಾಸಾ-1 ರವರು ಪಿ ಎಸ್ ಐ ಇವರಿಗೆ ಘಟನೆಯ ವಿಚಾರವಾಗಿ ವಿವರಿಸುತ್ತಿದ್ದರು. ನಂತರ ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಮಾಡಿರುತ್ತಾರೆ. ಸಾಕ್ಷಿಯು ನಿಪಿ-2 ಘಟನಾ ಸ್ಥಳದ ಮೇಲಿರುವ ತಮ್ಮ

ಸಹಿಯನ್ನು ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ಮತ್ತೆ ಏನನ್ನೂ ಮಾಡಿರುವುದಿಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್. ಆರ್ ಎನ್ ಇವರಿಂದಃ

2. ನೀವು ಪಂಚನಾಮೆ ಮಾಡಲಾಯಿತು ಎನ್ನುವ ದಿನದಂದು ನ್ಯಾಯಾಲಯದಲ್ಲಿ ನಿಮ್ಮದು ಯಾವುದಾದರೂ ಪ್ರಕರಣ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಕಳೆದ 10 ವರ್ಷದಲ್ಲಿ ನಿಮಗೆ ಸಂಬಂಧಪಟ್ಟು ಎಷ್ಟು ಪ್ರಕರಣಗಳು ಇರುತ್ತವೆ ಸಾಕ್ಷಿಯು ಒಂದು ಸಿವಿಲ್ ಹಾಗೂ ಒಂದು ಕ್ರಿಮಿನಲ್ ಪ್ರಕರಣ ಇರುತ್ತದೆ ಎಂದು ನುಡಿಯುತ್ತಾರೆ. ಕ್ರಿಮಿನಲ್ ಪ್ರಕರಣ ಯಾವುದು ಎಂದರೆ ಸಾಕ್ಷಿಯು ಸುಭಾಷ ಗಂಗಾಧರ ನಾಯಕ ಇವರು ಆಸ್ತಿಯ ವಿಚಾರವಾಗಿ ಹಲ್ಲೆ ಮಾಡಿದ ಪ್ರಕರಣವಾಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಸದರಿ ಕ್ರಿಮಿನಲ್ ಪ್ರಕರಣ ಬಿಟ್ಟರೆ ಬೇರೆ ಯಾವುದು ಇರುವುದಿಲ್ಲವಾ ಎಂದರೆ ಸಾಕ್ಷಿಯು ಬೇರೆ ಸಿವಿಲ್ ಪ್ರಕರಣದಲ್ಲಿ ಸಾಕ್ಷಿದಾರನಾಗಿ ಇರುತ್ತೇನೆ ಎಂದು ನುಡಿಯುತ್ತಾರೆ. ನೀವು ಹುಟ್ಟಿದಾಗಿನಿಂದ ಇಂದಿನವರೆಗೂ ನಿಮಗೆ ಸಂಬಂದಪಟ್ಟು ಒಟ್ಟು ಎಷ್ಟು ಪ್ರಕರಣಗಳು ಇರುತ್ತವೆ ಎಂದರೆ ಸಾಕ್ಷಿಯು 1 ಸಿವಿಲ್ ಹಾಗೂ 2 ಕ್ರಿಮಿನಲ್ ಪ್ರಕರಣಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ಅದು ಬಿಟ್ಟು ಬೇರೆ ಪ್ರಕರಣದಲ್ಲಿ ಸಾಕ್ಷಿದಾರನಾಗಿ ಬಂದಿರುತ್ತೇನೆ. ನಿಮ್ಮ ವಿರುದ್ಧ ಶೆಟ್ಟಿ ಎನ್ನುವವರು ತಮ್ಮ ಮಗಳನ್ನು ನೀವು ಅಪಹರಿಸಿಕೊಂಡು ಹೋಗಿರುತ್ತೀರಿ ಎಂದು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಸುಳ್ಳು ಫಿರ್ಯಾದಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಆ

ಸಂದರ್ಭದಲ್ಲಿ ಚಾಸಾ–1 ರವರೇ ನಿಮಗೆ ಸಹಾಯ ಮಾಡಲು ಹಾಗೂ ಸದರಿ ಪ್ರಕರಣದಿಂದ ಬಚಾವ್ ಮಾಡಲು ಬಂದಿದ್ದರು ಎಂದರೆ ಸರಿಯಲ್ಲ.

3. ಚಾಸಾ–1 ರವರಿಗೂ ಹಾಗೂ ನಿಮಗೂ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿಯು ಸುಮಾರು 20 ವರ್ಷಗಳಿಂದ ಪರಿಚಯ ಎಂದು ನುಡಿಯುತ್ತಾರೆ. ಅದು ಪರಿಚಯವೂ ಅಥವಾ ಆತ್ಮಿಯತೆಯೊ ಎಂದರೆ ಸಾಕ್ಷಿಯು ಅವರು ಸಮಾಜ ಸೇವೆಗೆಂದು ಕರೆದಾರ ಹೋಗುತ್ತೇನೆ ಎಂದು ನುಡಿಯುತ್ತಾರೆ. ಚಾಸಾ–1 ರವರು ತಮ್ಮ ಸಾಕ್ಷಿಯ ಪ್ಯಾರಾ 8 ರಲ್ಲಿ ನಿಮ್ಮ ಪರವಾಗಿ ಅಪಹರಣದ ಪ್ರಕರಣದಲ್ಲಿ ಬೆಂಬಲವಾಗಿ ನಿಂತುಕೊಂಡಿದ್ದರು ಎಂದು ಸಾಕ್ಷಿಯನ್ನು ನುಡಿದಿದ್ದು, ನೀವು ಹೇಳುತ್ತಿರುವುದು ನಿಜಾನಾ ಅಥವಾ ಅವರು ಹೇಳಿರುವುದು ನಿಜಾನಾ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ವಿರುದ್ಧ ಅಪಹರಣ ಪ್ರಕರಣದಲ್ಲಿ ಚಾಸಾ–1 ರವರು ನಿಮ್ಮ ಜೊತೆಗೆ ಬೆಂಬಲವಾಗಿ ನಿಂತುಕೊಂಡಿದ್ದರಾ ಅಥವಾ ಇಲ್ಲವಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ–1 ರವರ ಹುಟ್ಟಿದ ಹಬ್ಬದ ದಿನದಂದು ಪ್ರತಿವರ್ಷ ಪತ್ರಿಕೆಯಲ್ಲಿ ನೀವು ಮತ್ತು ಚಾಸಾ–3 ರವರು ಮುಖ ಪುಟದಲ್ಲಿ ಅವರ ಫೋಟೋವನ್ನು ಹಾಕಿ ಅಭಿನಂದನೆ ಸಲ್ಲಿಸುತ್ತೀರಿ ಎಂದರೆ ಸರಿ. ಕರಾವಳಿ ಮುಂಜಾವು ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದರೆ ಎಷ್ಟು ಖರ್ಚು ಆಗ್ತುತದೆ ಎಂದರೆ ಸಾಕ್ಷಿಯು ನಾನು ರೂ,500/– ಕೊಡುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಪ್ರಕಟಣೆಗೆ ರೂ.5 ನೂರು ಸಾಕಾಗುತ್ತಾ ಎಂದರೆ ಸಾಕ್ಷಿಯು ನಾನು ರೂ.5 ನೂರು ಕೊಟ್ಟು, ಧನಂಜಯ್ ಶಾನಭಾಗ

ಹಾಗೂ ಇನ್ನಿತರರು ಸೇರಿಕೊಂಡು ಕೊಡುತ್ತಾರೆ ಎಂದು ನುಡಿಯುತ್ತಾರೆ. ನೀವು ಅನೇಕ ವರ್ಷಗಳಿಂದ ಅವರ ಹುಟ್ಟುಹಬ್ಬಕ್ಕೆ ಹಾಗೂ ಅವರು ಕರೆದಾಗ ಹೋಗುತ್ತೀರಿ ಎಂದರೆ ಸರಿ. ಕಾರವಾರಕ್ಕೆ ಹೋಗಿ ಬರಲು ಅವರೇ ಖರ್ಚನ್ನು ಕೊಡುತ್ತಾರಾ ಎಂದರೆ ಸಾಕ್ಷಿಯು ನಾವೇ ನೋಡಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಕರಾವಳಿ ಮುಂಜಾವು ಪತ್ರಿಕೆಯ ಪ್ರಕಟಣೆಯಲ್ಲಿ ನೀವು ಮತ್ತು ಚಾಸಾ–3 ರವರು ಇರುತ್ತೀರಿ ಎಂದರೆ ಸರಿ. ನಿಮ್ಮ ಕುಟುಂಬದವರೂ ಸಹ ಅದರಲ್ಲಿ ಇರುತ್ತಾರೆ ಎಂದರೆ ಇರಬಹುದು. ಚಾಸಾ–1 ರವರು ಯಾರಿ ರೀತಿಯ ಹೋರಾಟ ಮಾಡುತ್ತಾರೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಭ್ರಷ್ಟಾಚಾರದ ವಿರುದ್ಧ ಮಾಡುತ್ತಾರೆ ಎಂದು ನುಡಿಯುತ್ತಾರೆ.

4. ಚಾಸಾ–1 ರವರು ನಿಮಗೆ ಎಷ್ಟು ಗಂಟೆಗೆ ಪಂಚನಾಮೆಗೆಂದು ಕರೆದಿರುತ್ತಾರೆ ಎಂದರೆ ಸಾಕ್ಷಿಯು ಕುಮಾರ ಹಾರ್ಡಕರ ಇವರು ಬೆಳಿಗ್ಗೆ 10 ಗಂಟೆಗೆ ಕರೆದಿರುತ್ತಾರೆ. ಅವರು ನಿಮಗೆ ಕರೆ ಮಾಡಿ ಕರೆದಿರುತ್ತಾರಾ ಅಥವಾ ಮನೆಗೆ ಬಂದು ಕರೆದಿರುತ್ತಾರಾ ಎಂದರೆ ಸಾಕ್ಷಿಯು ಅವರು ತಹಶೀಲ್ದಾರ ಕಚೇರಿಯ ಹತ್ತಿರ ಗೋಡೆ ಗಣಪತಿಗೆ ಕೈಮುಗಿಯಲು ಬಂದಾಗ ನಾನು ಪಹಣಿ ಪತ್ರಿಕೆಯನ್ನು ತೆಗೆಸಲು ಹೋಗಿದ್ದಾಗ ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ಆ ದಿನ ನೀವು ಪಹಣಿ ಪತ್ರಿಕೆಯನ್ನು ತೆಗೆಸಲು ಹೋಗಿರುತ್ತೀರಿ ಎಂದು ತೋರಿಸಲು ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ಮನೆಯಲ್ಲಿ ಇರಬಹುದು ಎಂದು ನುಡಿಯುತ್ತಾರೆ. ಚಾಸಾ–3 ರವರೂ ಸಹ ನಿಮ್ಮ ಜೊತೆಗೆ ದಾಖಲಾತಿ ಪಡೆಯಲು ಬಂದಿದ್ದರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ

ವಿಷಯವನ್ನು ಪಂಚನಾಮೆಯಲ್ಲಿ ನಮೂದು ಮಾಡಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

5. ಸಾಕ್ಷಿಗೆ ಒಂದು ಪತ್ರಿಕೆಯ ಪ್ರಕಟಣೆಯನ್ನು ತೋರಿಸಲಾಗಿ, ಅವರು ಅದನ್ನು ಓದಲಾಗಿ, ಚಾಸಾ-1 ರವರ ಬಗ್ಗೆ ಏನೆಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಒಂದು ಲಾಡ್ಜ ನಲ್ಲಿ ಒಬ್ಬ ಮಹಿಳೆಯ ಜೊತೆಗೆ ಅಕ್ರಮ ಚಟುವಟಿಕೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ ಎಂದು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಅದು ಒಳ್ಳೆಯ ಕೆಲಸನಾ ಅಥವಾ ಕೆಟ್ಟ ಕೆಲಸನಾ ಎಂದರೆ ಸಾಕ್ಷಿಯು ಪತ್ರಿಕೆಯಲ್ಲಿ ಬಂದಿರುವುದು ಎಷ್ಟು ಸರಿ ಎಂದು ನನಗೆ ಗೊತ್ತಿರುವುದಿಲ್ಲ. ಅವರು ಇಂತಹ ಪ್ರಕರಣಗಳಲ್ಲಿ ಸಿಕ್ಕಿ ಬಿದ್ದ ನಂತರ ನಿಮಂತವರನ್ನು ಬೆಳೆಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ನಿಮ್ಮನ್ನು ನ್ಯಾಯಾಲಯಕ್ಕೆ ಕರೆದಾಗ ನ್ಯಾಯಾಲಯದಲ್ಲಿ ಪೊಲೀಸರು, ಸಿಬ್ಬಂದಿಯರು, ವಕೀಲರು ಹಾಗೂ ಪಕ್ಷಗಾರರು ಇದ್ದರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಪೊಲೀಸರು ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಯಾವ ನಿರ್ಧಿಷ್ಟವಾದ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಶಿರಸ್ತೇದಾರರ ಕಚೇರಿಯ ಮುಂಬದಿಯಲ್ಲಿ ಇರುವ ಆವರಣದಲ್ಲಿ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಶಿರಸ್ತೇದಾರರ ಕಚೇರಿಯ ಮುಂದೆ ಎಷ್ಟು ಸೀಟುಗಳು ಇರುತ್ತವೆ ಎಂದರೆ ಸಾಕ್ಷಿಯು ಅಂದಾಜು 2-3 ಇರಬಹುದು ಎಂದು ನುಡಿಯುತ್ತಾರೆ. ಅದು ಯಾವ ನಿರ್ಧಿಷ್ಟ ಸೀಟು ಎಂದು ತೋರಿಸಿರುತ್ತಾರಾ ಎಂದರೆ ಸಾಕ್ಷಿಯು ಸೀಟಿನ ಮೇಲೆ ತೋರಿಸಿರುವುದಿಲ್ಲ, ವರಾಂಡದಲ್ಲಿ ತೋರಿಸಿರುತ್ತಾರೆ ಎಂದು

ನುಡಿಯುತ್ತಾರೆ. ಆ ಜಾಗ ಬಿಟ್ಟರೆ ಬೇರೆ ಯಾವುದೇ ಜಾಗವನ್ನು ತೋರಿಸಿರುವುದಿಲ್ಲ. ನ್ಯಾಯಾಲಯದ ಎಂಟ್ರೇನ್ಸಿನ ಎಡಬದಿಯಲ್ಲಿ ಕುಳಿತುಕೊಳ್ಳಲು ಸೀಟುಗಳು ಇರುತ್ತವೆ ಎಂದರೆ ಸರಿ. ನಂತರ ಅಲ್ಲಿಂದ ಸುಮಾರು 25 ಅಡಿ ಮುಂದೆ ಬಂದಾಗ ಬಲಬದಿಯಲ್ಲಿ ಶಿರಸ್ತೇದಾರರ ಕಚೇರಿಯ ಬರುತ್ತದೆ ಎಂದರೆ ಸರಿ. ಅಲ್ಲಿದ್ದಂತಹ ಸೀಟಿನಿಂದ ಪ್ರಧಾನ ಸಿವಿಲ್ ನ್ಯಾಯಾಲಯದ ಕಲಾಪ ಕಾಣಿಸುತ್ತದೆ ಎಂದರೆ ಸರಿ. ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸರ ಜೊತೆಗೆ ಬಂದ ಸಿಬ್ಬಂದಿಯವರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಬರಹಗಾರ ಯಾರು ಎಂದರೆ ಗೊತ್ತಿರುವುದಿಲ್ಲ. ಪಂಚನಾಮೆಗೆ ಇಲ್ಲಿ ಬರಲು ಬರವಣಿಗೆಯ ಮುಖಾಂತರ ಏನಾದರೂ ಕೊಟ್ಟಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

6. ಎಲ್ ಸಿ ನಾಯಕ ಎಂಬುವವರು ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸೂರ್ಯಾ ಬಾರ್ ಅವರದ್ದೇ ಎಂದರೆ ಗೊತ್ತಿರುವುದಿಲ್ಲ. ಅವರು ಯಾವ ಊರಿನವರು ಎಂದು ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಗೆ ನೀವೇ ಹೇಳಿ ಬರೆಸಿರುತ್ತೀರಾ ಎಂದರೆ ಚಾಸಾ–1 ರವರು ಹೇಳಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಹೇಳಿದ ಬರಹಗಾರರು ಏನಾದರೂ ಸಹಿಯನ್ನು ಮಾಡಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಚಾಸಾ–1 ರವರ ಪಕ್ಕಾ ಅಭಿಮಾನಿ ಹಾಗೂ ಅವರು ನಿಮ್ಮ ವಿರುದ್ಧ ದಾಖಲಾದ ಅಪರಾಧ ಪ್ರಕರಣದಲ್ಲಿ ನಿಮ್ಮ ಪರವಾಗಿ ನಿಂತುಕೊಂಡಿದ್ದರಿಂದ ಈಗ ನೀವು ಅವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ

ಸರಿಯಲ್ಲ. ಚಾಸಾ–1 ರವರು ಆ ದಿನ ಹೇಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ಅವರ ವಾಹನ ನ್ಯಾಯಾಲಯದ ಆವರಣದಲ್ಲಿ ಇತ್ತು ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ನಿಮ್ಮ ಹಾಗೂ ಚಾಸಾ–3 ರವರ ಮನೆಯು ಸುಮಾರು 2 ಕಿ.ಮೀ ಆಗುತ್ತದೆ ಎಂದು ಸಾಕ್ಷಿಯು 3 ಕಿ.ಮೀ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ಕೇವಲ ಠಾಣೆಯಲ್ಲಿ ಕುಳಿತುಕೊಂಡು ಸೃಷ್ಟಿ ಮಾಡಿಕೊಂಡಿದ್ದು, ಬೇರೆ ಸಾಕ್ಷಿದಾರರು ಸುಳ್ಳು ಸಾಕ್ಷಿ ಹೇಳಲು ಬರುವುದಿಲ್ಲ ಎಂಬ ಕಾರಣದಿಂದ ಅವರ ಆಪ್ತರಾದ ನಿಮ್ಮನ್ನು ಸೇರಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನೀವು ಅವರ ಅಂಧಾ ಅಭಿಮಾನಿಯಾಗಿದ್ದರಿಂದ ಸುಳ್ಳು ಸಾಕ್ಷಿ ಹೇಳಲು ಬಂದಿರುತ್ತೀರಿ ಎಂದರೆ ಸರಿಯಲ್ಲ.

<u>ಮರುವಿಚಾರಣೆ</u>: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.